ಕಥೆ



ಎಚ್.ಆರ್. ರಮೇಶ

ಕಲೆ: ಸುರೇಶ್ ಅರ್ಕಸಾಲಿ



# ಜಿಂಕೆ ಕಿವಿ

ಅದು ಪುರಾಣ ಪ್ರಸಿದ್ಧ ಊರು. ಶಿವ ತನ್ನ ಸತಿ ಪಾರ್ವತಿಯೊಂದಿಗೆ ಜಗಳವಾಡಿಕೊಂಡು ಸುಮಾರು ವರ್ಷಗಳ ಕಾಲ ಆ ಊರಿಗೆ ಹೊಂದಿಕೊಂಡಿರುವ ಗುಡ್ಡದಲ್ಲಿ ಬಂದು ಒಂಟಿಯಾಗಿ ವಾಸವಿದ್ದನಂತೆ. ಕ್ರಮೇಣ ಆ ಗುಡ್ಡ 'ಶಿವನಕಲ್ಲು' ಗುಡ್ಡ ಎಂದೇ ಹೆಸರಾಗಿದೆ. ಹಾಗೂ ಶಿವನಿಗೆ ಆ ಊರಿನಲ್ಲಿ ಉಳಿಯಲು ಜಾಗ ಕೊಟ್ಟಿದ್ದರಿಂದ ಪಾರ್ವತಿ ಆ ಊರ ಜನಗಳ ಮೇಲೆ ಕೋಪಗೊಂಡು ಕೊಟ್ಟಿರುವ ಶಾಪದ ಪರಿಣಾಮವಾಗಿ ಆ ಊರಿನಲ್ಲಿ ದಿನಕ್ಕೆ ಒಂದು ಮನೆಯಲ್ಲಿಯಾದರೂ ಗಂಡ ಹೆಂಡತಿಯರು ಜಗಳವಾಡುವುದು ಸಾಮಾನ್ಯ ಎಂದು ಊರಿನ ಹಿರೀಕರು ಹೇಳುತ್ತಾರೆ. ಅಷ್ಟೇ ಅಲ್ಲದೆ ಆ